# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 12–10–2017

## ಪ್ರಕಟಣೆಯ ಕೃಪೆಗಾಗಿ

**ಗುಣಾತ್ಮಕ ಶಿಕ್ಷಣ ನೀಡುವಲ್ಲಿ ವಿಚಾರ ಸಂಕಿರಣಗಳ ಪಾತ್ರ ಹಿರಿದು – ಶ್ರೀ ಉಮೇಶ್**

ಕೊಳ್ಳೇಗಾಲ 12–10–2017 : ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಬೆಳೆಸುವಲ್ಲಿ, ಗುಣಾತ್ಮಕ ಶಿಕ್ಷಣ ನೀಡುವಲ್ಲಿ ವಿಚಾರ ಸಂಕಿರಣ ಹಾಗೂ ಗೋಷ್ಠಿಗಳ ಪಾತ್ರ ಹಿರಿದು. ಅಲ್ಲಿ ನಡೆಯುವ ವಿಚಾರ ಮಂಥನ ಬೋಧಕರ ಹಾಗೂ ವಿದ್ಯಾರ್ಥಿಗಳ ಜ್ಞಾನ ಕೌಶಲ್ಯ ಹೆಚ್ಚಿಸುವಲ್ಲಿ ಸಹಕಾರಿ ಎಂದು ಶ್ರೀ ಉಮೇಶ್, ಚಾರ್ಟರ್ಡ್ ಅಕೌಂಟೆಂಟ್, ಮೈಸೂರು ರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕಾಮರ್ಸ್ ಕ್ಲಬ್ ವತಿಯಿಂದ **"ಬಂಡವಾಳ ಮಾರುಕಟ್ಟೆಗಳು ಹಾಗೂ ಕೈಗಾರಿಕಾ ಅಭಿವೃದ್ಧಿ ಹಣಕಾಸು ನಿಗಮ"** ಎಂಬ ವಿಷಯದ ಮೇಲೆ ಆಯೋಜಿಸಿದ್ದ ವಿಶೇಷ ಉಪನ್ಯಾಸ ಹಾಗೂ ವಿಚಾರ ಮಂಥನ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮಾತನಾಡಿದರು.

ಇಂದು ಹಲವಾರು ವೃತ್ತಿಗಳ ಕನಸನ್ನು ಹೊತ್ತು ವಿದ್ಯಾರ್ಥಿಗಳು ಕಾಲೇಜು ಎಂಬ ಕಲರ್‌ಫುಲ್ ಜೀವನಕ್ಕೆ ಕಾಲಿಡುತ್ತಾರೆ. ಆದರೆ ಪದವಿ ಮುಗಿಸಿ ಉದ್ಯೋಗಕ್ಕೆ ಹೋಗುವಾಗ ಮೊದಲಿನ ವಿಶ್ವಾಸವಾಗಲಿ, ಉತ್ಸಾಹವಾಗಲಿ ಇರುವುದಿಲ್ಲ. ಇದಕ್ಕೆ ಕಾರಣ ವೃತ್ತಿಪರ ಕೌಶಲ್ಯಗಳ ಕೊರತೆ. ಆದ್ದರಿಂದ ವಿದ್ಯಾರ್ಥಿ ಜೀವನದಲ್ಲೇ ವೃತ್ತಿ ಪರರಾಗಿ ಉದ್ಯೋಗಕ್ಕೆ ಅನುಗುಣವಾದ ವೃತ್ತಿಪರ ಗುಣಗಳನ್ನು ಪಡೆದುಕೊಳ್ಳುವಂತ ಗುರಿಯಿರಲಿ ಎಂದು ವಿದ್ಯಾರ್ಥಿನಿಯರಿಗೆ ಕಿವಿ ಮಾತು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಕಾಲೇಜು ಎಂದರೆ ಮಜಾ, ಮಸ್ತಿ ಅಲ್ಲ. ಬದಲಾಗಿ ಮಾನವೀಯ ಹಾಗೂ ನೈತಿಕತೆಯ ಮೌಲ್ಯಗಳನ್ನು ಕಲಿಯುವ ಸ್ಥಳ. ಪರಿಪೂರ್ಣ ವ್ಯಕ್ತಿತ್ವವನ್ನು ಹೊಂದುವಂತಹ ಸಮಯ. ಅಂತೆಯೇ ಯುವ ಸಮೂಹದವರಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಕಾಲೇಜುಗಳ ಜವಾಬ್ದಾರಿಯು ಸಮರ್ಪಕವಾಗಿ ನಿರ್ವಹಿಸುವಂತಾಗಬೇಕು. ವಿಚಾರ ಸಂಕಿರಣಗಳು, ಕಾರ್ಯಾಗಾರ, ಗೋಷ್ಠಿ, ಗುಂಪು ಚರ್ಚೆ, ವಿಶೇಷ ಉಪನ್ಯಾಸ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ ವಿದ್ಯಾರ್ಥಿಗಳನ್ನು ಪರಿಪೂರ್ಣ ವ್ಯಕ್ತಿತ್ವವುಳ್ಳ ಪ್ರಜೆಗಳನ್ನಾಗಿ ಮಾಡಬಹುದಾಗಿದೆ ಅಲ್ಲದೆ ಪದವಿನಂತರ ಉದ್ಯೋಗಸ್ಥರನ್ನಾಗಿ ಮಾಡಬಹುದಾಗಿದೆ ಎಂದು ತಿಳಿಸಿದರು.

ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ. ಎಂ. ಪ್ರಭು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಬಸವದತ್ತ ಮಹದೇವಪ್ರಶದ್ ಸ್ವಾಗತಿಸಿ, ವಂದಿಸಿದರು.

ಮೊದಲನೆ ಗೋಷ್ಠಿಯಲ್ಲಿ ಬಂಡವಾಳ ಮಾರುಕಟ್ಟೆಗಳು ಮತ್ತು ಎರಡನೇ ಗೋಷ್ಠಿಯಲ್ಲಿ ಭಾರತೀಯ ಹಣಕಾಸು ಮತ್ತು ಬ್ಯಾಂಕಿಂಗ್ ಸೇವೆಗಳು ಎಂಬ ವಿಷಯದ ಮೇಲೆ ಮೈಸೂರಿನ ಪ್ರಸಿದ್ಧ ಸನ್ನದು ಲೆಕ್ಕಾಧಿಕಾರಿಗಳಾದ ಶ್ರೀ ಉಮೇಶರವರು ನಡೆಸಿಕೊಟ್ಟರು. ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿನಿಯರು ಹಾಗೂ ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಶಾಸ್ತ್ರ ವಿಭಾಗದ ಕಾಮರ್ಸ್ ಕ್ಲಬ್ ವತಿಯಿಂದ ಶ್ರೀ ಉಮೇಶ್, ಚಾರ್ಟರ್ಡ್ ಅಕೌಂಟೆಂಟ್, ಮೈಸೂರು ರವರಿಂದ ಬಂಡವಾಳ ಮಾರುಕಟ್ಟೆಗಳು ಹಾಗೂ ಕೈಗಾರಿಕಾ ಅಭಿವೃದ್ಧಿ ಹಣಕಾಸು ನಿಗಮ ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಹಾಗೂ ವಿಚಾರ ಮಂಥನ ಕಾರ್ಯಕ್ರಮ. ಚಿತ್ರದಲ್ಲಿ ಡಾ. ಎಂ ಪ್ರಭು ಹಾಗೂ ಪ್ರಾಚಾರ್ಯ ಪ್ರೊ. ಉಮೇಶ ರವರನ್ನು ಕಾಣಬಹುದು.




ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಶಾಸ್ತ್ರ ವಿಭಾಗದ ಕಾಮರ್ಸ್ ಕ್ಲಬ್ ವತಿಯಿಂದ ಶ್ರೀ ಉಮೇಶ್, ಚಾರ್ಟರ್ಡ್ ಅಕೌಂಟೆಂಟ್, ಮೈಸೂರು ರವರಿಂದ ಬಂಡವಾಳ ಮಾರುಕಟ್ಟೆಗಳು ಹಾಗೂ ಕೈಗಾರಿಕಾ ಅಭಿವೃದ್ಧಿ ಹಣಕಾಸು ನಿಗಮ ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಹಾಗೂ ವಿಚಾರ ಮಂಥನ ಕಾರ್ಯಕ್ರಮ. ಚಿತ್ರದಲ್ಲಿ ಡಾ. ಎಂ ಪ್ರಭು ಹಾಗೂ ಪ್ರಾಚಾರ್ಯ ಪ್ರೊ. ಉಮೇಶ ರವರನ್ನು ಕಾಣಬಹುದು.



ಕಾರ್ಯಕ್ರಮದಲ್ಲಿ ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಶಾಸ್ತ್ರ ಹಾಗೂ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು.

